**SINDHI HIGH SCHOOL, BENGALURU**
**ANNUAL EXAMINATION: 2024-25**
**SUBJECT: L2 KANNADA**

| | |
|---|---|
| DATE: 28 / 03 / 2025 | MARKS:60 |
| CLASS: IV | READING TIME: 8.00 -8.15am |
| NO OF PRINTED SIDES: 6 | WRITING TIME: 8.15- |

**ಸೂಚನೆಗಳು:**

* ಪತ್ರಿಕೆಯು A ಮತ್ತು B ಎಂಬ ಎರಡು ಭಾಗಗಳನ್ನು ಒಳಗೊಂಡಿರುತ್ತವೆ.
* ಪ್ರಶ್ನೆಪತ್ರಿಕೆಯಲ್ಲಿ ಒಟ್ಟು 13 ಮುಖ್ಯ ಪ್ರಶ್ನೆಗಳಿರುತ್ತವೆ.
* ಪ್ರತಿಯೊಂದು ಪ್ರಶ್ನೆಗಳ ಸೂಚನೆಗಳನ್ನು ಸರಿಯಾಗಿ ಓದಿಕೊಂಡು ಉತ್ತರಿಸಿ.
* ಪ್ರಶ್ನೆ ಮತ್ತು ಉಪಪ್ರಶ್ನೆಗಳ ಸಂಖ್ಯೆಯನ್ನು ತಪ್ಪಿಲ್ಲದೆ ಬರೆಯಿರಿ.

**PART-A ( 30 ಅಂಕಗಳು )**
**ವಿಭಾಗ- ಎ**
**( ವಾಚನ ಮತ್ತು ಗ್ರಹಿಕಾ ಕೌಶಲ್ಯ ) ಅಂಕಗಳು-15**

**I.ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **(5 x 1= 5)**

ಒಂದು ಊರಿನಲ್ಲಿ ಒಬ್ಬ ರೈತನಿದ್ದ. ಅವನ ಮನೆಯ ಮುಂದೆ ಒಂದು ಸೇಬಿನ ಮರವಿತ್ತು. ಅವನು ಚಿಕ್ಕಂದಿನಿಂದಲೂ ಆ ಮರದ ಬಳಿ ಆಟ ಆಡುತ್ತಾ, ಆ ಮರ ಕೊಡುತ್ತಿದ್ದ ಹಣ್ಣುಗಳನ್ನು ತಿನ್ನುತ್ತಾ ಬೆಳೆದಿದ್ದ, ಹಲವಾರು ವರ್ಷಗಳು ಕಳೆದವು. ಅವನಿಗೂ ವಯಸ್ಸಾಗುತ್ತಾ ಬಂದಿತ್ತು. ಆ ಮರವೂ ಮುದಿಯಾಗಿ ಹಣ್ಣುಗಳನ್ನು ಕೊಡುತ್ತಿರಲಿಲ್ಲ. ಆ ರೈತ ಆ ಸೇಬಿನ ಮರವನ್ನು ಕಡಿದು ಮನೆಗೆ ಬೇಕಾದ ಮೇಜು-ಕುರ್ಚಿಗಳನ್ನು ಮಾಡಿಸಬೇಕೆಂದು ನಿರ್ಧರಿಸಿ, ಕೊಡಲಿ ಹಿಡಿದು ಮರದ ಬಳಿಗೆ ಬಂದಾಗ, ಆ ಮರದಲ್ಲಿ ಗೂಡು ಕಟ್ಟಿಕೊಂಡಿದ್ದ ಹಕ್ಕಿಗಳು ಭಯದಿಂದ ಅವನನ್ನು " ಈ ಮರವು ನಮಗೆ ಆಶ್ರಯವನ್ನು ಕೊಟ್ಟಿದೆ. ಇದನ್ನು ಕಡಿಯಬೇಡ " ಎಂದವು. ಆದರೆ ರೈತನ ಮನ ಕರಗದೆ ಆ ಮರಕ್ಕೆ ಎರಡು ಏಟು ಹಾಕಿಯೇ ಬಿಟ್ಟ. ಆಗ ಮೇಲಿನಿಂದ ಏನೋ ಬಿದ್ದಂತಾಯಿತು. ಅವನು ತಲೆ ಎತ್ತಿ ನೋಡಿದರೆ ಅಲ್ಲೊಂದು ಜೇನುಗೂಡು ಫಳಫಳ ಹೊಳೆಯುತ್ತಿತ್ತು. ಮತ್ತೊಂದು ಹನಿ ಅವನ ಬಾಯಿಗೇ ಬಿತ್ತು. ಅವನು ಚಪ್ಪರಿಸಿದ. ಆಹಾ! ಎಂಥಾ ಸಿಹಿಯಾದ ಜೇನು! ಅವನು ಹಲವಾರು ವರ್ಷಗಳು ಹಿಂದಕ್ಕೆ ಓಡಿ ಒಂದು ಪುಟ್ಟ ಹುಡುಗನೇ ಆಗಿಬಿಟ್ಟ.

ಅಂದು ತಾನು ಮರದೊಂದಿಗೆ ಬೆಳೆದದ್ದು, ಹಣ್ಣು ತಿಂದದ್ದು, ಹೀಗೆಯೇ ಜೇನು ಸವಿದದ್ದು ಎಲ್ಲವೂ ನೆನಪಾಗಿ ಅವನ ಕಣ್ಣುಗಳಲ್ಲಿ ನೀರು ಬಂದವು. ಆಗ ಅವನು ಮರ ಕಡಿಯುವುದಿಲ್ಲ ಎಂದು ನಿರ್ಧರಿಸಿದ. ಪಕ್ಷಿಗಳಿಗೆ ನಾನು ಮರವನ್ನು ಕಡಿಯುವುದಿಲ್ಲ, ನೀವು ಇನ್ನು ನಿಶ್ಚಿಂತೆಯಿಂದ ಇರಬಹುದು ಎಂದು ಹೇಳಿದ. ಹಕ್ಕಿಗಳು ಆನಂದದಿಂದ ಅವನಿಗಾಗಿ ಹಾಡಿದವು. ಜೇನುನೊಣಗಳು ಜೇನಿನ ಮಳೆ ಸುರಿಸಿದವು.

**ಪ್ರಶ್ನೆಗಳು.**

**1. ರೈತನ ಮನೆಯ ಮುಂದೆ ಈ ಮರವಿತ್ತು.**

A. ಬಾಳೆಯ B. ಮಾವಿನ C. ಸೇಬಿನ D. ಹಲಸಿನ

**2. ರೈತನ ಬಾಯಿಗೆ ಮರದ ಮೇಲಿಂದ ಬಿದ್ದ ವಸ್ತು ಇದಾಗಿತ್ತು.**

A. ನೀರು B. ಜೇನು C. ಹಾಲು D. ಮೊಸರು

**3. ಚಿಕ್ಕಂದಿನಿಂದಲ್ಲೂ ಮರದ ಬಳಿ ಆಟವಾಡುತ್ತಿದ್ದವರು:**

A. ರೈತನು B. ಪ್ರಾಣಿಗಳು C.ಬೇಟೆಗಾರನು D. ಸ್ನೇಹಿತರು

**4. ರೈತನು ಕಡಿದ ಮರದಿಂದ ಮನೆಗೆ __________ ವಸ್ತುವನ್ನು ಮಾಡಿಸಬೇಕೆಂದು ಕೊಂಡನು.**

A. ಕಿಟಕಿ - ಬಾಗಿಲು B.ಮೇಜು - ಕುರ್ಚಿ C. ಗೊಂಬೆಗಳು D. ದಾಂಡು

**5 . ರೈತನು ಮರ ಕಡಿಯಲು ತಂದ ಆಯುಧ __________**

A.ಕತ್ತಿ B. ಚಮಚ C.ಕಡ್ಡಿ D. ಕೊಡಲಿ

**II. ಈ ಕೆಳಗೆ ಕೊಟ್ಟಿರುವ 'ಡಾ. ಸಲೀಂ ಅಲಿ' ಈ ಪರಿತ ಗದ್ಯಭಾಗವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** (5 x 1 = 5)

ಒಂದು ದಿನ ಹುಡುಗನೊಬ್ಬ ಸತ್ತು ಬಿದಿದ್ದ ಹಕ್ಕಿಯೊಂದನ್ನು ನೋಡಿ ಕುತೂಹಲಗೊಂಡ, ಆ ಹಕ್ಕಿಯ ಕುತ್ತಿಗೆಯ ಕೆಳಗೆ ಇದ್ದ ಹಳದಿ ಬಣ್ಣ ಅವನ ಗಮನ ಸೆಳೆಯಿತು. ಹಕ್ಕಿಯ ಹೆಸರೇನೆಂದು ಸೋದರಮಾವನನ್ನು ಕೇಳಿದಾಗ ಅವರಿಗೆ ಅದರ ಬಗ್ಗೆ ಹೆಚ್ಚಿನ ವಿವರ ಗೊತ್ತಿರಲಿಲ್ಲ. ಅದರ ಬಗ್ಗೆ ತಿಳಿದುಕೊಳ್ಳಲು ಆತನನ್ನು ಮುಂಬಯಿಯ ಪ್ರಕೃತಿ ವಿಜ್ಞಾನ ಸಂಘದ ಪಕ್ಷಿತಜ್ಞರ ಬಳಿ ಕರೆದೊಯ್ದರು. ಅಲ್ಲಿಯ ಪಕ್ಷಿತಜ್ಞ ಡಬ್ಲ್ಯೂ. ಎಸ್. ಮಿಲ್ಲರ್ಡ್ ಬಾಲಕನ ಕೈಯಲ್ಲಿ ಸತ್ತು ತೂಗಾಡುತ್ತಿದ್ದ ಹಕ್ಕಿಯನ್ನು ಗಮನಿಸಿ ಇದು 'ಕಾಡುಗುಬ್ಬಚ್ಚಿ' ಎಂದು ತಿಳಿಸಿದರು. ಅಲ್ಲದೆ ಬಾಲಕನ ಕುತೂಹಲವನ್ನು ಗಮನಿಸಿದ ಅವರು ಅವನನ್ನು ಸಂಘದ ಕಛೇರಿಯ ಎಲ್ಲಾ ಭಾಗಗಳಿಗೂ ಕರೆದೊಯ್ದರು. ಎಲ್ಲಾ ಕಡೆ ಸತ್ತ ಪಕ್ಷಿಗಳನ್ನು ಸಂರಕ್ಷಿಸಿ ಒಪ್ಪವಾಗಿ ಜೋಡಿಸಿಟ್ಟಿದ್ದರು. ಬಾಲಕ ಈ ವಿಸ್ಮಯದ ಪಕ್ಷಿಲೋಕವನ್ನು ಕಂಡು ನಿಬ್ಬೆರಗಾದ. ಈ ಪಕ್ಷಿ ಪ್ರಪಂಚದಲ್ಲಿ ಅಷ್ಟು ದೊಡ್ಡ ಪಕ್ಷಿ ಪ್ರಪಂಚ ಇದೆ ಎನ್ನುವುದನ್ನು ಕನಸಿನಲ್ಲಿಯೂ ಊಹಿಸಿರಲಿಲ್ಲ. ಅಂದಿನಿಂದ ಆತ 'ನನ್ನ ಬದುಕು ಇನ್ನು ಮುಂದೆ ಪಕ್ಷಿ ಅಧ್ಯಯನಕ್ಕೆ ಮೀಸಲು' ಎಂದು ನಿರ್ಧರಿಸಿದ. ಮುಂದೆ ಖ್ಯಾತ ಪಕ್ಷಿತಜ್ಞ ಎನಿಸಿದ. ಆತನೇ ಪಕ್ಷಿಪ್ರೇಮಿ ಸಲೀಂ ಅಲಿ.

ಡಾ. ಸಲೀಂ ಮೊಯಿಜುದ್ದೀನ್ ಅಬ್ದುಲ್ ಅಲಿ ಅವರು ನವೆಂಬರ್ 12. 1896ರಂದು ಮುಂಬಯಿಯ ಶ್ರೀಮಂತ ಕುಟುಂಬದಲ್ಲಿ ಜನಿಸಿದರು. ಹತ್ತು ಮಕ್ಕಳಲ್ಲಿ ಸಲೀಂರವರು ಕೊನೆಯವರು. ಇವರು ಜನಿಸಿದ ಮೂರು ವರ್ಷದಲ್ಲೆ ತನ್ನ ತಂದೆತಾಯಿಯವರನ್ನು ಕಳೆದುಕೊಂಡು ಅನಾಥರಾದರು. ಬಳಿಕ ಅವರ ಸೋದರಮಾವ ಅಮೀರುದ್ದೀನ್ ತಯಾಬ್ಜಿಯವರ ಆಶ್ರಯದಲ್ಲಿ ಬೆಳೆದರು. ಹೈಸ್ಕೂಲ್ ಮುಗಿಸಿದ ಅಲಿಯವರು ನಂತರ ತನ್ನ ಸಹೋದರನ ಜೊತೆ ಕೆಲಸ ಮಾಡಲು ಬರ್ಮಾಕ್ಕೆ ಹೋದರು. ಅಲ್ಲಿ ಅದಿರಿನ ಗಣಿಯಲ್ಲಿ ದುಡಿಯುತ್ತಾ ಪಕ್ಷಿವೀಕ್ಷಣೆ ಮತ್ತು ಅದರ ಅಧ್ಯಯನವನ್ನು ಮುಂದುವರಿಸಿದರು. ಈ ಸಂದರ್ಭದಲ್ಲಿ ಅವರಿಗೆ 'ತೆಹ್ಮಿನಾ'ರ ಜೊತೆಗೆ ಮದುವೆಯಾಯಿತು. ನಂತರ ಅಲಿಯವರು ಪತ್ನಿ ತೆಹ್ಮಿನಾರ ಜೊತೆಯಲ್ಲಿ ಮುಂಬಯಿಗೆ ಹಿಂದಿರುಗಿದರು. ಅಲಿಯವರು ಭಾರತದ ತುಂಬೆಲ್ಲಾ ಸಂಚರಿಸಿ ಪಕ್ಷಿ ಪ್ರಭೇದದ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ಕಲೆಹಾಕಿ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆಯತೊಡಗಿದರು. ನಂತರ ಸಲೀಂ ಅಲಿಯವರು ಕೆಲವೇ ದಿನಗಳಲ್ಲಿ ಪಕ್ಷಿಪ್ರೇಮಿ ಸಲೀಂಅಲಿ ಎಂದು ಪ್ರಖ್ಯಾತರಾದರು.

**ಪ್ರಶ್ನೆಗಳು:**

**1. ಕಾಡುಗುಬ್ಬಚ್ಚಿಯ ಕುತ್ತಿಗೆಯ ಕೆಳಗೆ ಈ ಬಣ್ಣವಿತ್ತು.**

A. ಬಿಳಿ B. ಕಪ್ಪು C. ಕೆಂಪು D. ಹಳದಿ

**2. ಸಲೀಂ ಅಲಿಯವರು ಕೆಲಸ ಮಾಡಲು ಇಲ್ಲಿಗೆ ಹೋದರು.**

A. ಬರ್ಮಾ B. ಚೀನಾ C. ನೇಪಾಳ D. ಶ್ರೀಲಂಕಾ

**3. ಸಲೀಂ ಅಲಿ ಯವರ ಸೋದರಮಾವನ ಹೆಸರು ________**

A. ಸಲೀಂ ಅಲಿ B. ತಹ್ಮಿನಾ C.ಅಮೀರುದ್ದೀನ್ ತಯಾಬ್ಜಿ

D.ಅಮೀರುದ್ದೀನ್ ಸಲೀಂ

**4. ಡಾ. ಸಲೀಂ ಅಲಿಯವರು ________ ರಂದು ಜನಿಸಿದರು.**

A. 1896 B. 1886 C. 1876 D. 1866

**5. ಮುಂಬಯಿಯ ಪ್ರಕೃತಿ ವಿಜ್ಞಾನ ಸಂಘದ ಪಕ್ಷಿತಜ್ಞನ ಹೆಸರು ________**

A. ಡಬ್ಲ್ಯೂ. ಎಸ್. ಸ್ಕಾಟ್ ಲ್ಯಾಂಡ್ B. ಡಬ್ಲ್ಯೂ. ಎಸ್. ಮಿಲ್ಲರ್ಡ್

C. ಡಬ್ಲ್ಯೂ. ಎಸ್.ಸ್ವೀಡನ್ D. ಡಬ್ಲ್ಯೂ. ಎಸ್. ರಿಚರ್ಡ್ಸ್

**III. ಈ ಕೆಳಗೆ ಕೊಟ್ಟಿರುವ ವೈ ಎಸ್ ಕೃಷ್ಣಮೂರ್ತಿ ಕವಿಯು ಬರೆದಿರುವ ' ಹಣ್ಣು ಕಾಯಿ ಮದುವೆ ' ಪಠಿತ ಪದ್ಯಭಾಗವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ: ( 5 x 1= 5)**

ಹಾಗಲಕಾಯಿಗೂ ಮಾವಿನ ಹಣ್ಣಿಗೂ ಮದುವೆ ನಡೆದಿತ್ತು
ಛತ್ರದ ತುಂಬ ತರಕಾರಿ ಹಣ್ಣಿನ ಗುಂಪೇ ತುಂಬಿತ್ತು ॥ ೧ ॥

ಬಾಳೆಗೊನೆ ಬಾಗಿ ನಮಿಸಿ ಸ್ವಾಗತ ಅಂತಿತ್ತು
ಡೊಳ್ಳುಹೊಟ್ಟೆ ಕುಂಬಳಕಾಯಿ ಡೋಲು ಬಾರಿಸಿತು
ಸೋರೆಕಾಯಿ ಸೊಗಸಾಗಿ ವಾಲಗ ಊದ್ತಿತ್ತು
ತೆಂಗಿನಕಾಯಿ ಹೋಳುಗಳೆರಡೂ ತಾಳ ಹಾಕ್ತಿತ್ತು ॥೨॥

ಪಿಳ್ಳೆ ಜುಟ್ಟಿನ ಬದನೆಕಾಯಿ ಮಂತ್ರ ಹೇಳ್ತಿತ್ತು
ಕೆಂಪುಮೂತಿ ಮೆಣಸಿನಕಾಯಿ ಹೋಮ ಮಾಡ್ತಿತ್ತು
ಗಂಡು ಹೆಣ್ಣು ಹೊಗೆ ತಾಳದೆ ಕಣ್ಣೀರ್ ಹಾಕ್ತಿತ್ತು
ಹೀರೇಕಾಯಿ ಅದನು ನೋಡಿ ನಕ್ಕು ನಲಿತಿತ್ತು ॥ ೩ ॥

ಬಾಳೆಕಾಯಿ ಬಾಗಿಬಾಗಿ ಎಲೆ ಹಾಕ್ತಿತ್ತು
ಹುರುಳಿಕಾಯಿ ಊಟಕ್ಕೇಳಿ ಅಂತ ಕೂಗ್ತಿತ್ತು
ಸೌತೆಕಾಯಿ ಲೋಟಕ್ಕೆಲ್ಲ ನೀರು ಹಾಕ್ತಿತ್ತು
ಆಲೂಗಡ್ಡೆ ಎಲೆತುಂಬ ಊಟ ಬಡಿಸ್ತಿತ್ತು ॥ ೪ ॥

ಪಡುವಲಕಾಯಿ ಬಳುಕಿ ಬಳುಕಿ ವೀಳ್ಯ ಕೊಡ್ತಿತ್ತು
ತೊಂಡೆಕಾಯಿ ತಾಂಬೂಲ ಕೊಟ್ಟು ಟಾ ಟಾ ಹೇಳ್ತಿತ್ತು
ಅಂತು ಇಂತು ಸಿಹಿಗೂ ಕಹಿಗೂ ಮದುವೆ ಆಗಿತ್ತು
ಮಾವಿನಹಣ್ಣು ಹಾಗಲಕಾಯಿ ಜೋಡಿಯಾಗಿತ್ತು ॥೫॥

V .ಕೆಳಗಿನವುಗಳನ್ನು ಸೂಚನೆಯಂತೆ ಬರೆಯಿರಿ. (3 x 1 = 3)

1) ' ದೇವಾಲಯ ' – ಈ ಪದವನ್ನು ಸ್ವಂತವಾಕ್ಯದಲ್ಲಿ ಬರೆಯಿರಿ.

2) ಈ ಕೆಳಗಿನ ಗಾದೆಯನ್ನು ಪೂರ್ಣಗೊಳಿಸಿ.

ಹೊತ್ತು ಕಳೆದರೆ ಹೋಯಿತು ____________

3) ತಿನ್ನಲು ಹಲಸಿನ ರುಚಿಯಾಗಿರುತ್ತದೆ ಹಣ್ಣು – ಈ ವಾಕ್ಯವನ್ನು ಸರಿಪಡಿಸಿ ಬರೆಯಿರಿ.

I . ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. ( 5 X 1=5)

1. ಮಂಗನ ರಾಣಿಯ ಹೆಸರು ________

A. ನಾಯಿ B. ಕುದುರೆ C. ಗಿಳಿ D. ಕೋಳಿ

2. ಮಂತ್ರವಾದಿಯು ________ಯಿಂದ ಜನರಿಗೆ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದನು.

A. ಯಂತ್ರಶಕ್ತಿ B. ಜ್ಞಾನಶಕ್ತಿ C.ಮಂತ್ರಶಕ್ತಿ D. ಯುದ್ಧಶಕ್ತಿ

. ಬಿಸಿಲು ಮಳೆ ಸೇರಿ ________ತಂಪು ಮಾಡಿತು.

A.ನೀರು B. ಧಗೆ C. ಗಾಳಿ D. ಬೆಳಕು

. ಬೆಕ್ಕನ್ನು ________ ಅಟ್ಟಿಸಿಕೊಂಡು ಬಂದಿತು.

A. ನಾಯಿ B. ಹುಲಿ C. ಕರಡಿ D. ಆನೆ

ಮಂಗನಿಗೆ ಪಂಚೆಯನ್ನುಡಿಸಿ ________ ಹಾಕಿದರು.

A. ಕಿರೀಟ B. ಪಂಚೆ C. ಸೀರೆ D. ಅಂಗಿ

PART- B: ( 30 ಅಂಕಗಳು)

ವಿಭಾಗ - ಸಿ

( ಬರವಣಿಗೆ ಕೌಶಲ್ಯ ) ಅಂಕಗಳು - 8

ಮೈಸೂರಿನಲ್ಲಿ ನಿಮ್ಮ ಅಕ್ಕನ ಮದುವೆ ಇರುವ ಕಾರಣದಿಂದ ಎರಡು ದಿನಗಳ ರಜೆಯನ್ನು ಕೋರಿ ಪ್ರಾಂಶುಪಾಲರಿಗೆ ರಜೆ ಪತ್ರ ಬರೆಯಿರಿ. ( 4 )

ಈ ಕೆಳಗಿನ ಯಾವುದಾದರೂ <u>ಒಂದು</u> ವಿಷಯವನ್ನು ಕುರಿತು 7-8 ವಾಕ್ಯಗಳಲ್ಲಿ ಕಿರು ಟಿಪ್ಪಣಿ ಬರೆಯಿರಿ. ( 4 )

1. ನಿಮ್ಮ ಮೆಚ್ಚಿನ ತರಕಾರಿ 2. ಶಾಲಾ ಪ್ರವಾಸ

ವಿಭಾಗ-ಡಿ

( ಪದ್ಯಗಳ ಅಧ್ಯಯನ ) ಅಂಕಗಳು – 22

ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. ( 4 X 1= 4 )

ಬಾಳೆಯ ಎಲೆಯನ್ನು ಯಾವುದಕ್ಕೆ ಉಪಯೋಗಿಸುವರು?

ಮಕ್ಕಳು ಯಾವ ಊರಿಗೆ ಪ್ರವಾಸ ಹೊರಟರು?

ಪ್ರಶ್ನೆಗಳು:

1. ಮೆಣಸಿನಕಾಯಿ __________ ಮಾಡುತ್ತಿತ್ತು.
A. ನಾಟಕ B. ಊಟ C.ಹೋಮ D.ಕಣ್ಣೀರು

2. ಎಲೆ ತುಂಬಾ ಊಟ ಬಡಿಸಿದವರು __________
A. ಆಲೂಗಡ್ಡೆ B. ಬದನೆಕಾಯಿ C. ಈರುಳ್ಳಿ D.ತೆಂಗಿನಕಾಯಿ

3. ಸೋರೆಕಾಯಿ __________ ಊದುತ್ತಿತ್ತು.
A. ಕೊಳಲು B. ವಾಲಗ C.ತಬಲ D.ಪೀಪಿ

4 .ಮಾವಿನ ಹಣ್ಣು ಮತ್ತು __________ ಗೆ ಮದುವೆ ನಡೆದಿತ್ತು.
A. ಹುರುಳಿಕಾಯಿ B. ತೊಂಡೆಕಾಯಿ C. ಪಡುವಲಕಾಯಿ D. ಹಾಗಲಕಾಯಿ

5. ತೊಂಡೆಕಾಯಿ __________ ಕೊಟ್ಟು ಟಾ ಟಾ ಹೇಳುತ್ತಿತ್ತು.
A. ತಾಂಬೂಲ B.ವಿಳೆದಲೆ C.ನೀರು D. ಬಾಳೆಹಣ್ಣು

## ವಿಭಾಗ-ಬಿ

( ಅನ್ವಯಿಕ ವ್ಯಾಕರಣ ಮತ್ತು ಪಠ್ಯಪೂರಕ ಅಧ್ಯಯನ ) ಅಂಕಗಳು -15

IV. ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿಬರೆಯಿರಿ. ( 7 X 1 = 7)

1.'ಸಮ್ಮತಿ' ಈ ಪದ ಸಮಾನಾರ್ಥಕ ಪದ.
A. ನಿರಾಕರಣೆ B. ಬೇಸರ C. ದಕ್ಷತೆ D. ಒಪ್ಪಿಗೆ

2. ' ಭಯ '- ಈ ಪದದ ವಿರುದ್ಧ ಪದ.
A. ಭಯ B. ನಭೀಯ C. ನಿರ್ಭಯ D. ಜಯ

3. ' ಮಾವ '- ಈ ಪದದ ಅನ್ಯಲಿಂಗ ರೂಪ.
A. ಚಿಕ್ಕಮ್ಮ B. ಅತ್ತೆ C. ದೊಡ್ಡಮ್ಮ D. ಅತ್ತಿಗೆ

4. ' ಸ್ಮಾರಕ ' - ಈ ಪದದ ಬಹುವಚನ ರೂಪ.
A. ಸ್ಮಾರಕಗಳು B. ಪುಸ್ತಕಗಳು C. ಮನೆಗಳು D. ಗಿಡಗಳು

5. ' ಕುಣಿದಾಡಿ ' - ಈ ಪದವನ್ನು ಬಿಡಿಸಿ ಬರೆದಾಗ.
A. ಕುಣಿ + ದಾಡಿ B. ಕುಣಿದು + ಕಾಡಿ C. ಕುಣಿದು + ಆಡಿ D.ಕುಣಿದು+ ಓಡಿ

6. 'ಪ್ರಾಣಿಗಳ ಹುಸಿರಾಟಕ್ಕೆ ಆಮ್ಲಜನಕ ಬೇಕು ' - ಗೆರೆ ಎಳೆದ ಪದದ ಸರಿಯಾದ ರೂಪವನ್ನು ಗುರುತಿಸಿ.
A. ವಸಿರಾಟಕ್ಕೆ B. ಉಸಿರಾಟಕ್ಕೆ C. ಒಸಿರಾಟಕ್ಕೆ D. ಹೋಸಿರಾಟಕ್ಕೆ

7 ಅವನು ಪ್ರತಿದಿನ ಮನೆಯಲ್ಲಿ ಪುಸ್ತಕವನ್ನು ಓದುವನು – ಈ ವಾಕ್ಯದಲ್ಲಿ ಬರುವ ಸರ್ವನಾಮ ಪದವನ್ನು ಗುರುತಿಸಿ.
A. ಅವನು B. ಪ್ರತಿದಿನ C. ಮನೆಯಲ್ಲಿ D. ಓದುವನು

3. ಗಾಳಿಪಟ ಯಾವುದಕ್ಕೆ ಸಿಕ್ಕಿಹಾಕಿಕೊಂಡಿತು?

4. ಉದ್ಯಾನವನದಲ್ಲಿನ ಗಿಡ-ಮರಗಳು ಏನೆಂದು ಮಾತಾಡಿಕೊಂಡವು?

**X. ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (4 X 2= 8)**

1. ಗಾಳಿಪಟ ಪದ್ಯದಲ್ಲಿ ಕಂಡು ಬರುವ ನೀತಿಯೇನು?

2. ಮದ್ದಿನ ಮನೆಯನ್ನು ಏಕೆ ನಿರ್ಮಿಸಿದ್ದಾರೆ?

3. ಯಾವ ಪರಂಪರೆಯನ್ನು ಬೆಳೆಸುವುದು ನಮ್ಮ ಕರ್ತವ್ಯ?

4. ತೆಂಗಿನಮರ ಕಲ್ಪವೃಕ್ಷ ಹೇಗೆ?

**XI. ಈ ಕೆಳಗಿನ ಪ್ರಶ್ನೆಗೆ ಮೂರು- ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. ( 3 X 1= 3)**

1. ದಾಸವಾಳ, ಗಿಡ – ಮರಗಳಿಗೆ ಏನೆಂದು ಬುದ್ಧಿವಾದ ಹೇಳಿತು?

**XII. ಈ ಕೆಳಗಿನ ಪ್ರಶ್ನೆಗೆ ಮೂರು- ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. ( 3 X 1=3 )**

1. ಗಾಳಿಪಟ ಯಾರ ಪಾಲಾಯಿತು?ಮತ್ತು ಪುಟ್ಟನು ಗೆಳೆಯರಿಗೆ ಜಂಭದಿಂದ ಏನನ್ನು ಹೇಳಿದನು?

**XIII.ಈ ಕೆಳಗಿನ ವಾಕ್ಯವನ್ನು ಯಾವ ಪಾಠದಿಂದ ಆರಿಸಲಾಗಿದೆ,ಈ ಮಾತನ್ನು ಯಾರು ಯಾರಿಗೆ ಹೇಳಿದರು. (2 X 2= 4)**

1." ಟಿಪ್ಪುಸುಲ್ತಾನ್ ಮಡಿದ ಸ್ಥಳದ ಬಗ್ಗೆ ಮಾಹಿತಿ ಇದೆ " .

2." ಎಲ್ಲರೂ ನನ್ನ ಹಣ್ಣಿಗಾಗಿ ಮುಗಿ ಬೀಳುತ್ತಾರೆ ".

*******************